ದೇವರಾಜುಗೆ ಗೊತ್ತಾಗಿಬಿಟ್ಟಿತು! ಆದರೆ ಪುಣ್ಯವಶಾತ್ ತಾನು ಬದುಕಿರುವೆ! ಸುತ್ತ ನೂರಾರು ಜನ ಸತ್ತಿದ್ದಾರೆ! ತಾನು ನಿಜಕ್ಕೂ ಅದೃಷ್ಟವಂತ ಎಂದುಕೊಂಡರು. ಒಂದಿನಿತೂ ತೊಂದರೆಯಾಗದೆ ತಾನು ಉಳಿದಿರುವುದು ನಿಜಕ್ಕೂ ಅದೃಷ್ಟವೇ! ಈ ಪರಿಸ್ಥಿತಿಯಲ್ಲಿ ಮನೆಗೆ ಹೋದರೆ ಸಾಕು ಎನಿಸಿತು. ಇಲ್ಲಿದ್ದು ಮಾಡುವಂತದ್ದು ಏನೂ ಇಲ್ಲ. ರಕ್ಷಣಾ ವ್ಯವಸ್ಥೆ ಇರುವಾಗ ಏನೂ ಮಾಡಲಾರದ ಸ್ಥಿತಿಯಲ್ಲಿರುವ ತನಗೇನು ಕೆಲಸ. ಮೆಲ್ಲಗೆ ಚೂರಾಗಿದ್ದ ವಿಮಾನದ ನಡುವೆ, ಅಸ್ತವ್ಯಸ್ಥವಾಗಿ ಬಿದ್ದಿದ್ದವರ ನಡುವೆ ಜಾಗ ಮಾಡಿಕೊಂಡು ವಿಮಾನದ ಈಚೆ ಬಂದರು! ಭೂಮಿಯ ಮೇಲೆ ಸೇಡು ತೀರಿಸಿಕೊಳ್ಳುವಂತೆ ಮಳೆ ರಾಚುತ್ತಿತ್ತು. ಆಚೆ ಅಪಘಾತಕ್ಕೀಡಾಗಿದ್ದ ವಿಮಾನದಲ್ಲಿರುವವರನ್ನು ರಕ್ಷಿಸಲು ನೂರಾರು ಜನರು ಓಡಾಡುತ್ತಿದ್ದರು. ವಾಹನಗಳು ನಿಂತಿದ್ದವು. ವೈದ್ಯರ ನಡುವೆ ಓಡಿದ ದೇವರಾಜು ದೂರಕ್ಕೆ ಬಂದು ಹಿಂತಿರುಗಿ ನೋಡಿದರು. ರನ್‌ವೇಯಿಂದ ದೂರ ಸಾಗಿ ವಿಮಾನ ಕಾಂಪೌಂಡಿಗೆ ಅಪ್ಪಳಿಸಿರುವುದು ಕಂಡಿತು. ಹೇಗೂ ಬೆಂಗಳೂರು ತಲುಪಿರುವೆನಲ್ಲ? ಜೀವ ಉಳಿಯಿತು! ತನ್ನ ಲಗೇಜು? ತಾನು ಜರ್ಮನಿಯಲ್ಲಿ ಖರೀದಿಸಿದ ವಸ್ತುಗಳು? ಅವನ್ನು ಹೇಗೆ ಪಡೆಯುವುದು? ಮೊದಲು ಜೀವ ಉಳಿಯಿತಲ್ಲ... ನಾಳೆ ಬಂದು ಲಗೇಜು ಪಡೆಯಬಹುದಲ್ಲ? ಜೊತೆಗೆ ಚೂರುಚೂರಾಗಿರುವ ವಿಮಾನದಲ್ಲಿ ತಮ್ಮ ವಸ್ತುಗಳು ಯಾವ ಸ್ಥಿತಿಯಲ್ಲಿವೆಯೋ? ಅದರ ಚಿಂತೆ ಬೇಡ! ಜೀವ ಉಳಿಯಿತಲ್ಲ ಸಾಕು! ಓಡುತ್ತಾ, ಮಳೆಯಿಂದ ರಕ್ಷಿಸಿಕ್ಕೊಳ್ಳುತ್ತಾ ದೇವರಾಜು ವಿಮಾನ ನಿಲ್ದಾಣದೊಳಗೆ ಬಂದರು.

ಅಪಘಾತ ನಡೆದಿರುವ ಸಂದರ್ಭದಲ್ಲಿ ವಿಮಾನ ನಿಲ್ದಾಣದ ಯಾರೊಬ್ಬರೂ ದೇವರಾಜುರನ್ನು ಕಣ್ಣೆತ್ತಿ ಕೂಡ ನೋಡಲಿಲ್ಲ! ಎಂತಹ ಅಚ್ಚರಿ! ಎಲ್ಲರೂ ಅಪಘಾತವಾಗಿರುವ ವಿಮಾನದಲ್ಲಿರುವ ಜನರ ರಕ್ಷಣೆಯಲ್ಲೇ ನಿರತರಾಗಿದ್ದರು. ಇದೂ ಒಳಿತೇ ಆಯಿತು. ಎಮಿಗ್ರೇಶನ್, ಕಸ್ಟಮ್ಸ್ ಯಾವ ತೊಂದರೆಯೂ ಇಲ್ಲ ಎಂದು ದೇವರಾಜು ನೇರ ನಿಲ್ದಾಣದ ಆಚೆ ಬಂದರು. ಆಚೆ ಬಸ್ಸೊಂದು ಸಿದ್ಧವಾಗಿ ನಿಂತಿತ್ತು. ಇನ್ನು ಟ್ಯಾಕ್ಸಿಯ ಉಸಾಬರಿಯೇಕೆ? ಬರಿಗೈಯಲ್ಲಿರುವಾಗ ಟ್ಯಾಕ್ಸಿಯ ಅವಶ್ಯಕತೆಯಿಲ್ಲ. ಮನೆ ತಲುಪಲು ಬಸ್ಸೇ ಸಾಕು ಎಂದು ಓಡುತ್ತಾ ಬಂದು ಅದನ್ನು ಹತ್ತಿದರು. ಅವರು ಹತ್ತುವ ಮುಂಚೆಯೇ ಬಸ್ಸು ಚಲಿಸತೊಡಗಿತ್ತು! ದೇವರಾಜು ತಮ್ಮ ಬಲವೆಲ್ಲಾ ಉಪಯೋಗಿಸಿ ಓಡಿದರು ಎನ್ನುವುದಕ್ಕಿಂತ ಹಾರಿ ಬಸ್ಸು ಹತ್ತಿದ ದೇವರಾಜು ನಿಟ್ಟುಸಿರಿಟ್ಟರು! ಜೀವ ಉಳಿಯಿತು! ಮನೆ ಕೂಡ ತಲುಪುವುದು ಖಚಿತವಾಯಿತು!

ಬಸ್ ಕಂಡಕ್ಟರ್ ಟಿಕೆಟ್ ಕೊಡುತ್ತಾ ಬಂದ. ದೇವರಾಜು ಕೊನೆಯ ಸೀಟಿನಲ್ಲಿ, ಬಸ್ಸಿನ ಹಿಂದಿನ ಬಾಗಿಲ ಬಳಿಯೇ ಕೂತಿದ್ದರು. ಅವರನ್ನು ನೋಡಿ ಏನನ್ನಿಸಿತೋ ಕಂಡಕ್ಟರನಿಗೆ? ಬಹುಶಃ ವಿಮಾನ ಅಪಘಾತದಲ್ಲಿ ಸಿಕ್ಕಿ ಬಚಾವಾದವನಂತೆ ಕಂಡಿರಬೇಕು. ಅದಕ್ಕೇ ಆತ ದೇವರಾಜು ಕಡೆಗೆ ಬರಲೇ ಇಲ್ಲ. ಅವರನ್ನು ನೋಡಿಯೂ ನೋಡದಂತೆ ಕಂಡಕ್ಟರ್ ಹಿಂದೆ ತಿರುಗಿಬಿಟ್ಟ!

ದೇವರಾಜು ಮನೆಯ ಬಗ್ಗೆ ಚಿಂತಿಸುತ್ತಿದ್ದರು. ಇಷ್ಟೊತ್ತಿಗೆ ಮಡದಿಯಿಂದ ಫೋನು ಬರಬೇಕಿತ್ತು. 'ನಾನು ಬೇಗನೆ ಎದ್ದಿರುತ್ತೇನೆ. ನಿಮ್ಮ ವಿಮಾನ ಲ್ಯಾಂಡಿಂಗ್ ಆದ ಸಮಯಕ್ಕೆ ಫೋನ್ ಮಾಡುತ್ತೇನೆ. ಮೊಬೈಲು ಚಾರ್ಜ್ ಮಾಡಿ ಇಟ್ಟುಕೊಂಡಿರಿ' ಎಂದಿದ್ದಳು. ಆದರೆ, ಜಾನಕಿ ಫೋನೇಕೆ ಮಾಡಿಲ್ಲ? ದೇವರಾಜು ಫೋನು ತೆಗೆದು ನೋಡಿದರು. ಅದು